ಆ) ಹಾಗಿಲ್ಲದಿದ್ದಲ್ಲಿ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಅವಶ್ಯಕತೆ ಕಂಡು ಬರುವುದಿಲ್ಲ.

ವಿಷಯ: ರಾಗಿಗುಡ್ಡಕ್ಕೆ ನೇರ ಬಸ್ ಸೌಲಭ್ಯ

1147 (1627)

ಶ್ರೀ ರಾಮಲಿಂಗರೆಡ್ಡಿ (ಜಯನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರದಲ್ಲಿರುವ ರಾಗಿಗುಡ್ಡದ ದೇವಸ್ಥಾನವು ಒಂದು ಪವಿತ್ರ ಸ್ಥಳವಾಗಿದ್ದು, ಪ್ರತಿದಿನ ನೂರಾರು ಭಕ್ತಾಧಿಗಳು ಈ ದೇವಾಸ್ಥಾನಕ್ಕೆ ನಗರದ ವಿವಿಧ ಭಾಗಗಳಿಂದ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನಗರದ ವಿವಿಧ ಭಾಗಗಳಿಂದ ನೇರ ಬಸ್ ಸೌಲಭ್ಯವನ್ನು ರಜಾ ದಿನಗಳಲ್ಲಿ ರಾಗಿಗುಡ್ಡಕ್ಕೆ ಕಲ್ಪಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ರಜಾ ದಿನಗಳಲ್ಲಿ ವಿಶೇಷ ಬಸ್ ಸೌಲಭ್ಯದ ಅವಶ್ಯಕತೆ ಇರುವುದಿಲ್ಲ, ಆದರೆ ವಿವಿಧ ಬಡಾವಣೆಗಳಿಂದ ಸಾಕಷ್ಟು ನೇರ ಬಸ್‌ಗಳ ಸೌಲಭ್ಯವಿರುತ್ತದೆ.

ವಿಷಯ: ಹೊಂಬೇಗೌಡ ನಗರ ಸ್ಲಮ್‌ಗಾಗಿ ನೋಟಿಫೈ ಮಾಡಿರುವ ಜಾಗ

1148 (1628)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಶ್ರೀ ಹೆಚ್.ಡಿ.ರೇವಣ್ಣ, ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಹೊಂಬೇಗೌಡ ಸ್ಲಮ್‌ಗಾಗಿ ನೋಟಿಫೈ ಮಾಡಿದ ಜಾಗವೆಷ್ಟು?

ಆ) ಇದಕ್ಕೆ ಸಂಬಂಧಪಟ್ಟಂತೆ ಸರ್ವೆ ನಂ.21, 22 ಮತ್ತು 24 ಅರೆ ಕೆಂಪನಹಳ್ಳಿ,

ಬೇಗೂರು ಹೋಬಳಿಯಲ್ಲಿದ್ದ ಕೊಳಚೆ ಪ್ರದೇಶದ ನಿವಾಸಿಗಳು ಈ ಜಾಗವನ್ನು ಖಾಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಖಾಲಿಯಾಗಿರತಕ್ಕ ಜಾಗದಲ್ಲಿ ಈ ಕೊಳಚೆ ಪ್ರದೇಶಗಳಿಗೆ ಸಂಬಂಧ ಪಡದವರು ಅಕ್ರಮವಾಗಿ ಸೇರಿಕೊಂಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಅಕ್ರಮವಾಗಿ ಸೇರಿಕೊಂಡವರನ್ನು ಖಾಲಿ ಮಾಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೊಂಬೇಗೌಡ ಕೊಳಚೆ ಪ್ರದೇಶಕ್ಕಾಗಿ ಈ ಕೆಳಕಂಡ ಸರ್ವೆ ನಂ.ಗಳಲ್ಲಿ ಒಟ್ಟು 0-34 ಗುಂಟೆ ಜಮೀನನ್ನು ನೋಟಿಫೈ ಮಾಡಲಾಗಿದೆ.

ಸ.ನಂ. 22ರಲ್ಲಿ 0-28

ಸ.ನಂ. 24ರಲ್ಲಿ 0-06

ಆ) ಈ ಕೊಳಚೆ ಪ್ರದೇಶವು ಸ.ನಂ.22 ಮತ್ತು 24ರಲ್ಲಿ ಮಾತ್ರವಿದ್ದು, ನ.ನಂ.21ರ ಜಮೀನಿನಲ್ಲಿ ಇರುವುದಿಲ್ಲ. ಸ.ನಂ.22ರ ಪ್ರದೇಶದಲ್ಲಿದ್ದ 3 ಜನ ಕೊಳಚೆ ನಿವಾಸಿಗಳು ಗುಡಿಸಲುಗಳಿದ್ದ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿ ಖಾಲಿ ಮಾಡಿರುವುದು ಇತ್ತೀಚೆಗಷ್ಟೆ ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಇ) ಸ.ನಂ.22 ರ ಪ್ರದೇಶದ ಗುಡಿಸಲು ಸಂಖ್ಯೆ 1,2 ಮತ್ತು 3ರಲ್ಲಿ ವಾಸಿಸುತ್ತಿದ್ದ ನಿವಾಸಿಗಳು ತಮ್ಮ ಗುಡಿಸಲುಗಳನ್ನು ಕ್ರಯಕ್ಕೆ ಇತರರಿಗೆ ಮಾರಿ ಗುಡಿಸಲುಗಳನ್ನು ಖಾಲಿ ಮಾಡಿರುತ್ತಾರೆ. ಖರೀದಿಸಿರುವವರು ಈ ಮನೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವುದಾಗಿ ಇತ್ತೀಚೆಗಷ್ಟೆ ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಈ) ಖರೀದಿಸಿದ ಮನೆಗಳ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಕಾನೂನು ಪ್ರಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವಿಷಯ: ರಾಜ್ಯದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ವಸತಿಗಳ ನಿರ್ಮಾಣ.

1150 (1719)

ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?